net **4%** Per Annum

# ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ

## INTEREST SUBSIDY SCHEME FOR SCHEDULED CASTE / SCHEDULED TRIBE ENTREPRENEURS





ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ

# ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ದಿಮೆದಾರರಿಗೆ ಬಡ್ಡಿ ಸಹಾಯಧನ ಯೋಜನೆ

**ಉದ್ದೇಶ :**

ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡಗಳ ಉದ್ದಿಮೆದಾರರು ಅತಿ ಸಣ್ಣ / ಸಣ್ಣ / ಸೇವಾಕ್ಷೇತ್ರದ ಉದ್ದಿಮೆಗಳ ಸ್ಥಾಪನೆಗೆ ಹಾಗೂ ಹಾಲಿ ಇರುವ ಘಟಕಗಳ ವಿಸ್ತರಣೆ / ವೈವಿಧ್ಯೀಕರಣ / ಆಧುನೀಕರಣಗೊಳಿಸಲು ಪ್ರೋತ್ಸಾಹ ನೀಡುವುದು.

**ಬಡ್ಡಿದರ :** ಶೇ.4 ರ ಬಡ್ಡಿದರ ಅನ್ವಯಿಸುವುದು.

**ಅರ್ಹತೆ :**

ಈ ಯೋಜನೆಯ ಪ್ರಯೋಜನ ಪಡೆಯಲು ಅರ್ಹ ಘಟಕದ ಪ್ರವರ್ತಕರೆಲ್ಲರೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿರಬೇಕು. ಘಟಕದ ಮಾಲಿಕತ್ವದಲ್ಲಿ / ಪಾಲುದಾರರಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳ ಉದ್ದಿಮೆದಾರರನ್ನು ಹೊರತುಪಡಿಸಿ ಬೇರೆಯವರಿದ್ದಲ್ಲಿ ಬಡ್ಡಿ ಸಹಾಯಧನ ಸೌಲಭ್ಯ ಪಡೆಯಲು ಅನರ್ಹರಾಗುತ್ತಾರೆ. ಅಲ್ಲದೆ ಅರ್ಹ ಘಟಕದ ಫಲಾನುಭವಿಗಳು ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಅಥವಾ ಎರಡೂ ಜನಾಂಗಕ್ಕೆ ಸೇರಿದವರಾಗಿರಬಹುದು.

**ಸಾಲದ ಮೊತ್ತ :**

- ಈ ಯೋಜನೆಯಡಿಯಲ್ಲಿ ಸಂಸ್ಥೆಯಿಂದ ದೊರೆಯುವ ಕನಿಷ್ಠ ಸಾಲದ ಮೊತ್ತವು ರೂ.20.00 ಲಕ್ಷಗಳಾಗಿರುತ್ತದೆ;
- ಯೋಜನಾ ಪ್ರಸ್ತಾವನೆಗೆ ಅನುಗುಣವಾಗಿ ಒಂದೇ ಬಾರಿಗೆ ದುಡಿಮೆ ಬಂಡವಾಳದ ಗರಿಷ್ಠ ಮಿತಿ ರೂ.50.00 ಲಕ್ಷಗಳನ್ನು ಒಳಗೊಂಡಂತೆ ಸಂಸ್ಥೆಯಿಂದ ದೊರೆಯುವ ಗರಿಷ್ಠ ಸಾಲದ ಮೊತ್ತವು ರೂ.1,000.00 ಲಕ್ಷಗಳಾಗಿರುತ್ತದೆ. ಅಲ್ಲದೆ, ಪುನಃ ದುಡಿಮೆ ಬಂಡವಾಳದ ಅವಧಿ ಸಾಲವನ್ನು ಪಡೆಯಲು ಈ ಯೋಜನೆಯಲ್ಲಿ ಅವಕಾಶವಿರುವುದಿಲ್ಲ.
- ಈ ಯೋಜನೆಯಡಿ ಹೊಸ ಉದ್ದಿಮೆಗಳ ಸ್ಥಾಪನೆಗೆ ಅಥವಾ ಹಾಲಿ ಇರುವ ಘಟಕಗಳ ವಿಸ್ತರಣೆಗೆ / ವೈವಿಧ್ಯೀಕರಣ / ಆಧುನೀಕರಣಕ್ಕಾಗಿ ಒಂದಕ್ಕಿಂತ ಹೆಚ್ಚು ಬಾರಿ ಸಾಲವನ್ನು ಪಡೆಯಬಹುದಾಗಿದ್ದು, ಒಟ್ಟಾರೆ ಪಡೆಯಲಾದ ಸಾಲವು ಗರಿಷ್ಠ ಸಾಲದ ಮಿತಿಗಿಂತ ಹೆಚ್ಚಾಗಿರಬಾರದು.

**ಮರುಪಾವತಿಯ ಅವಧಿ:**

ರೂ.500.00 ಲಕ್ಷಗಳವರೆಗಿನ ಸಾಲಗಳಿಗೆ ವಿರಾಮಾವಧಿಯನ್ನು ಒಳಗೊಂಡಂತೆ 8 ವರ್ಷಗಳವರೆಗೆ ಮತ್ತು ರೂ.500.00 ಲಕ್ಷಗಳಿಗಿಂತ ಮೇಲ್ಪಟ್ಟು ಹಾಗೂ ರೂ. 1,000.00 ಲಕ್ಷಗಳವರೆಗಿನ ಸಾಲಗಳಿಗೆ 10 ವರ್ಷಗಳವರೆಗಿನ ಮರುಪಾವತಿಯ ಅವಧಿಯನ್ನು ನಿಗದಿಪಡಿಸಲಾಗಿದೆ.

**ಇತರೆ :**

- ಕರ್ನಾಟಕ ಸರ್ಕಾರ / ಭಾರತ ಸರ್ಕಾರದ ಯಾವುದೇ ಯೋಜನೆಯಡಿ ಘಟಕಗಳು ಈಗಾಗಲೇ ಬಡ್ಡಿ ಸಹಾಯಧನ ಸೌಲಭ್ಯ ಪಡೆದುಕೊಂಡಿದ್ದಲ್ಲಿ ಅಂತಹ ಘಟಕಗಳು ಪುನಃ ಈ ಯೋಜನೆಯಡಿಯಲ್ಲಿ ಬಡ್ಡಿ ಸಹಾಯಧನ ಪ್ರಯೋಜನ ಪಡೆಯಲು ಅನರ್ಹರಾಗಿರುತ್ತಾರೆ;
- ಸಂಸ್ಥೆಯ ಸಾಲ ಮೊತ್ತದ ಮರುಪಾವತಿಯಲ್ಲಿ ಸುಸ್ತಿದಾರರಾದಲ್ಲಿ, ಫಲಾನುಭವಿಗಳು ಈ ಯೋಜನೆಯ ಪ್ರಯೋಜನ ಪಡೆಯಲು ಅನರ್ಹರಾಗಿರುತ್ತಾರೆ.
- ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಎಷ್ಟೇ ಮೊತ್ತದ ಯೋಜನಾ ವೆಚ್ಚವನ್ನು ಪರಿಗಣಿಸುವ ಸ್ವಾತಂತ್ರ್ಯವನ್ನು ಹೊಂದಿರುತ್ತದೆ. ಆದಾಗ್ಯೂ, ಬಡ್ಡಿ ಸಹಾಯಧನವನ್ನು ರೂ.1,000.00 ಲಕ್ಷಗಳ ಸಾಲದ ಮೊತ್ತಕ್ಕೆ ಸೀಮಿತಗೊಳಿಸಲಾಗಿದೆ. ಸಾಲದ ಮೊತ್ತವು ರೂ.1,000.00 ಲಕ್ಷಗಳಿಗಿಂತಲೂ ಹೆಚ್ಚಾಗಿದ್ದಲ್ಲಿ, ರೂ.1,000.00 ಲಕ್ಷಗಳ ಮೇಲ್ಪಟ್ಟ ಸಾಲದ ಮೊತ್ತಕ್ಕೆ ಸಂಬಂಧಿಸಿದಂತೆ ಸಂಸ್ಥೆಯು ವಿಧಿಸುವ ಬಡ್ಡಿಯನ್ನು ಪ್ರವರ್ತಕರೇ ಭರಿಸಬೇಕಾಗುತ್ತದೆ.
- ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆಯು ಸಾಮಾನ್ಯ ಬಡ್ಡಿ ದರದ ಆಧಾರದ ಮೇಲೆ ಸಾಲ ಮಂಜೂರು ಮಾಡುತ್ತದೆ. ಫಲಾನುಭವಿಗಳು ಈ ಯೋಜನೆಯಡಿ ಎಲ್ಲಾ ಪ್ರಕರಣಗಳಲ್ಲೂ ಪಾವತಿಸಲೇಬೇಕಾದ ಬಡ್ಡಿ ದರ ಶೇ.4 ರಷ್ಟು ಮಾತ್ರ. ಇವುಗಳಲ್ಲಿನ ವ್ಯತ್ಯಾಸದ ಬಡ್ಡಿಯನ್ನು ಬಡ್ಡಿ ಸಹಾಯಧನದ ರೂಪದಲ್ಲಿ ಕರ್ನಾಟಕ ಸರ್ಕಾರವು ಸಂಸ್ಥೆಗೆ ಭರಿಸುತ್ತದೆ.

**ವಿಶೇಷ ಸೂಚನೆ:**

ಸರ್ಕಾರದ ಹಾಗೂ ಸಂಸ್ಥೆಯ ಮಾರ್ಗಸೂಚಿಗನುಗುಣವಾಗಿ ಕಾಲಕಾಲಕ್ಕೆ ಯೋಜನೆಗಳಲ್ಲಿ ಬದಲಾವಣೆಗಳಾಗಬಹುದು.
ಹೆಚ್ಚಿನ ಮಾಹಿತಿಗಾಗಿ ಹತ್ತಿರದ ಕ.ರಾ.ಹ.ಸಂಸ್ಥೆಯ ಶಾಖಾ ಕಛೇರಿಗಳನ್ನು ಸಂಪರ್ಕಿಸಬಹುದು.

# INTEREST SUBSIDY SCHEME FOR SCHEDULED CASTE / SCHEDULED TRIBE ENTREPRENEURS

**Objective:**

In order to encourage SC/ST Entrepreneurs to establish Micro / Small Scale / Services Enterprises to expand / diversify / modernization of their existing units, the GoK has introduced the interest subsidy scheme on loans sanctioned to SC / ST entrepreneurs by KSFC.

**Rate of interest:** The effective rate of interest is 4% only.

**Eligible Borrowers:**

The unit shall be fully owned by SC / ST entrepreneurs i.e., all promoters in proprietary / partnership / company shall belong to SC/ST community only. The ownership / share holdings of units even in part by other than SC/STs are not eligible for interest subsidy. Entrepreneurs either can be SCs / STs or both.

**Loan Amount:**

- Minimum loan amount under the scheme is Rs.20.00 lakhs.
- Maximum loan amount under the scheme is Rs.1,000.00 lakhs which includes term loan and one time working capital term loan based on the project proposal but working capital term loan is restricted to maximum of Rs.50.00 lakhs. However, repetition of working capital term loan sanction is not allowed.
- The loan can be availed for establishing new units or expanding / diversifying / modernizing their existing units for more than one occasion, but the aggregate loan extended shall not be more than maximum limit under the scheme.

**Repayment Period:**

The repayment period is 8 years including moratorium period in case of loan upto Rs.500.00 lakhs and upto 10 years in case of loan above Rs.500.00 lakhs but below Rs.1,000.00 lakhs.

**Others:**

- The units which have availed the interest subsidy under any other scheme of GoK/GoI are not eligible for interest subsidy under this scheme;
- To be eligible for interest concession under the scheme, the units should not be in default in repayment to KSFC;
- KSFC is at liberty to consider any amount of project cost. However, the interest subsidy is restricted to Rs.1,000.00 lakhs of the loan. Interest amount on the balance loan amount beyond Rs. 1,000.00 lakhs is required to be borne by the entrepreneurs;
- KSFC may sanction loans with normal applicable rate of interest, the effective interest rate to be paid by the beneficiary / borrower will be 4%. The difference between the normal lending rate of KSFC and effective interest rate of 4% will be re-imbursed by GoK.

**Disclaimer/Note:**
The parameters of the Scheme may change from time to time depending upon the guidelines of the Government and the Corporation. Please contact the Branch Office near to you for more details.